ಶ್ರೀ ಸಿದ್ದರಾಮಯ್ಯ: ಅಯಿತು ನೀವು ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ, ನೀವು ಕುಳಿತುಕೊಳ್ಳಿ ಶ್ರೀನಿವಾಸ್‌ರವರೆ, ನಿಮ್ಮ ಜಿಲ್ಲೆಯಲ್ಲಿಯೇ ಹೆಚ್ಚು ಬರಗಾಲವಿರುವುದು. ನೀವೇ ಈ ರೀತಿ ಮಧ್ಯೆ ಹೇಳುವುದಕ್ಕೆ ನಿಂತರೆ ಬರಗಾಲವೇ ಇಲ್ಲವೆಂದಂತಾಗುತ್ತದೆ, district incharge minister ರವರೇ ಈ ರೀತಿ ಹೇಳುತ್ತಿದ್ದಾರೆ, ಕೋಲಾರದಲ್ಲಿ ಬರಗಾಲವಿಲ್ಲವೆಂದರೆ ನಿಮ್ಮ ಜನ ನಿಮಗೆ ಬೈಯುತ್ತಾರೆ. ಆದುದರಿಂದ ಇಷ್ಟು ಭೀಕರ ಬರಗಾಲ ಇದೆ. 178 ತಾಲ್ಲೂಕುಗಳಲ್ಲಿ ಬರಗಾಲ ಇದೆಯೆಂದು ಒಪ್ಪಿಕೊಳ್ಳುತ್ತಾರೆ. ಇಲ್ಲಿಯವರೆಗೆ ಎಷ್ಟು ಜನ ಕೂಲಿಗಾಗಿ ಬೇಕಾಗಿರುವುದು, ಅದರಲ್ಲಿ ಎಷ್ಟು ಜನರನ್ನು ಗುರುತು ಹಚ್ಚಿದಿರಿ? ಎಷ್ಟು demand ಇತ್ತು? ಎಷ್ಟು man days ಇಲ್ಲಿಯವರೆಗೆ create ಮಾಡಿದ್ದಾರೆ? ಇವೆಲ್ಲವನ್ನು ಹೇಳಬೇಕೋ ಬೇಡವೋ? ಈಗ ದಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಇಷ್ಟು ಜನಕ್ಕೆ ಕೆಲಸ ಬೇಕಾಗಿತ್ತು, ಇಷ್ಟು ಗ್ರಾಮಗಳಲ್ಲಿ ಕುಡಿಯುವ ನೀರು ಇರಲಿಲ್ಲ, ಇಷ್ಟು ಕಡೆ bore well ಗಳು ಹಾಕಿದ್ದೇವೆ, ಇಷ್ಟು ಕಡೆ pipeline ಗಳು ಹಾಕಿದ್ದೇವೆ, ಇಷ್ಟು ಜಾನುವಾರುಗಳಿಗೆ ಮೇವು ಕೊಟ್ಟಿದ್ದೇವೆ. ಎನ್ನುವ ಬಗ್ಗೆ ಈ ವಿವರಗಳನ್ನು ಹೇಳಬೇಕಾಗಿತ್ತು. ಪಕ್ಕದ ಜಿಲ್ಲೆಯಾದ ಗದಗ್‌ನಲ್ಲಿ ಬಹಳ ಭೀಕರ ಬರಗಾಲ ಇದೆ. ಆಮೇಲೆ BPL card ಕೊಟ್ಟಿಲ್ಲ. ಬಹಳ ಜನರಿಗೆ ತೊಂದರೆಯಾಗಿದೆ. ಕುಡಿಯುವ ನೀರಿಗೆ ದುಡ್ಡಿದ್ದರೂ ಕೂಡ ನೀವು ಖರ್ಚು ಮಾಡಿಲ್ಲ. 90 ಹಳ್ಳಿಗಳನ್ನು shift ಮಾಡಬೇಕೆಂದು ಹೇಳಿದ್ದೀರಿ, ಆದರೆ ಇವತ್ತಿನವರೆಗೂ ಒಂದು ರೂಪಾಯಿ ಖರ್ಚು ಮಾಡಿಲ್ಲ. ಇವೆಲ್ಲಕ್ಕೂ ಉತ್ತರವೇ ಇಲ್ಲ. ಆದುದರಿಂದ ಇವರ ಉತ್ತರದಿಂದ ನಮಗೆ total ಆಗಿ ಸಮಾಧಾನವಾಗಿಲ್ಲ. ಈ ಸರ್ಕಾರ ಬರಗಾಲ ನಿಭಾಯಿಸುವುದರಲ್ಲಿ ಸಂಪೂರ್ಣವಾಗಿ ಸೋತಿದೆ, ವಿಫಲವಾಗಿದೆ, This government has miserably failed. ಕೇವಲ ಕುರ್ಚಿ ಉಳಿಸಿಕೊಳ್ಳಲು ಎರಡು ಪಕ್ಷಗಳು ಅಧಿಕಾರಕ್ಕೋಸ್ಕರ ಇದ್ದಾರೆ ಹೊರತು ಜನರ ಬಗ್ಗೆ ಯಾವುದೇ ಕಾಳಜಿ ಇಲ್ಲ. ಹಳ್ಳಿಗಾಡಿನ ಜನರ ಬಗ್ಗೆ ಕಾಳಜಿ ಇಲ್ಲ. ಬರಗಾಲದ ಬಗ್ಗೆ ಕಾಳಜಿ ಇಲ್ಲ. ಸರ್ಕಾರದ ನಿಷ್ಕ್ರಿಯತೆಯನ್ನು ಹಾಗೂ ರೈತರ ಬಗ್ಗೆ ಕಾಳಜಿ ಇಲ್ಲದೇ ಇರುವಂತಹ ಸರ್ಕಾರದ ನೀತಿಯನ್ನು ವಿರೋಧಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರಾದ ಮಾನ್ಯ ಸಿದ್ದರಾಮಯ್ಯನವರು ಸೇರಿದಂತೆ ಸಭೆಯಲ್ಲಿ ಹಾಜರಿದ್ದಂತಹ ಎಲ್ಲಾ ಕಾಂಗ್ರೆಸ್ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೇ, ನಾವು ಇಲ್ಲಿ ಇನ್ನು ಇದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಸಭೆಯಲ್ಲಿ ಉತ್ತರ ಕೇಳುವುದಕ್ಕೆ ಅವರು ತಯಾರಿಲ್ಲ. ಎಲ್ಲಾ ರೀತಿಯಲ್ಲಿ ಸಮಾಧಾನಕರವಾಗಿ ಉತ್ತರ ಹೇಳಿದರೂ ಕೂಡ ಅವರಿಗೆ ಉತ್ತರ ಕೇಳುವಷ್ಟು ವ್ಯವಧಾನ ಹಾಗೂ ಸಮಾಧಾನ ಇಲ್ಲ. ನಿನ್ನೆ ಮಾನ್ಯ ಈಶ್ವರಪ್ಪನವರು ಹೇಳುವಾಗಲೂ ಕೂಡ ಅದೇ ರೀತಿ ಮಾಡಿದರು. ಅವರಿಗೆ ಉತ್ತರ ಕೇಳುವುದಕ್ಕೆ ಸಮಾಧಾನ ಇಲ್ಲ. ಸ್ಪಷ್ಟೀಕರಣ ಕೇಳಿ ಉತ್ತರ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಏನೂ ಕಾಳಜಿ ಅವರಿಗೆ ಇಲ್ಲ. ಸಭಾತ್ಯಾಗ ಮಾಡುವುದರ ಮೂಲಕ ರಾಜಕಾರಣ ಮಾಡುವುದು ಸರಿಯಲ್ಲ. ಬರಗಾಲದಲ್ಲೂ ಸಹ ರಾಜಕಾರಣ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಎರಡು ದಿವಸದಿಂದ ಆದಂತಹ ಚರ್ಚೆಗೆ ಮಾನ್ಯ ಕಂದಾಯ ಸಚಿವರು ಕೊಟ್ಟಂತಹ ಉತ್ತರ ಸಮರ್ಪಕವಾಗಿಲ್ಲ ಮತ್ತು ಹಣಕಾಸಿನ ಖರ್ಚು ಎಷ್ಟಾಗಿದೆ? Mandates ಎಷ್ಟು create ಆಗಿದೆ? ಎಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ ಎನ್ನುವುದರ ಬಗ್ಗೆ ಮಾಹಿತಿಯನ್ನು ಸರಿಯಾಗಿ ಕೊಡುವುದರಲ್ಲಿ ಸಂಪೂರ್ಣವಾಗಿ ಅವರು ವಿಫಲರಾಗಿದ್ದಾರೆ. ರಾಜ್ಯದಲ್ಲಿ 8 ತಿಂಗಳಿನಿಂದ ಬರಗಾಲ ಎದುರಿಸುತ್ತಿದ್ದರೆ, ಅವರ ಪ್ರಕಾರ ಒಂದೊಂದು ತಾಲ್ಲೂಕಿಗೆ ಹಣ ಬಿಡುಗಡೆ ಮಾಡಿರತಕ್ಕಂಥಾದ್ದು ಕೇವಲ ಒಂದೂವರೆ ಕೋಟಿ ರೂಪಾಯಿ ಅಷ್ಟೆ. ಅದ್ದರಿಂದ ಈ ಸರ್ಕಾರ ಬರವನ್ನು ಎದುರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಯವರು ಕೂಡ ಸಭಾತ್ಯಾಗ ಮಾಡಿದರು)

(ಗೊಂದಲ)